ಅ. ರಾಜ್ಯದಲ್ಲಿ ಈ ಯೋಜನೆಗೆ ಒಳಪಡದ ಜಿಲ್ಲೆಗಳು ಯಾವುವು;

ಇ. ಈ ಯೋಜನೆಗೆ ಒಳಪಡದ ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ರಾಜ್ಯ ಸರ್ಕಾರವು ವಿಶೇಷ ಅನುದಾನವನ್ನು ನೀಡಲು ಆಲೋಚಿಸಿದೆಯೆ ? (ವಿವರ ನೀಡುವುದು) ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):-

ಅ. 1. ವಿಶ್ವಬ್ಯಾಂಕ್ ನೆರವಿನಲ್ಲಿ: 1. ಬೆಂಗಳೂರು (ರೂರಲ್) 2. ಶಿವಮೊಗ್ಗ, 3. ಬೆಳಗಾಂ, 4. ಮೈಸೂರು 5. ಮಂಡ್ಯ, 6. ದಕ್ಷಿಣ ಕನ್ನಡ, 7. ಗುಲ್ಬರ್ಗಾ, 8. ಬೀದರ್, 9. ಬಳ್ಳಾರಿ, 10. ರಾಯಚೂರು (ಸಹಾಯ ಧನದ ಮೊತ್ತ ರೂ. 301.40 ಕೋಟಿ).

2. ಡ್ಯಾನಿಡಾ ನೆರವಿನಲ್ಲಿ: 1. ಕೋಲಾರ – ಬಾಗೇಪಲ್ಲಿ ತಾಲ್ಲೂಕು, 2. ಚಿತ್ರದುರ್ಗ – ಜಗಳೂರು ತಾಲ್ಲೂಕು, 3. ಬಿಜಾಪುರ – ಹುನಗುಂದ ತಾಲ್ಲೂಕು (ಸಹಾಯಧನ 10.60 ಕೋಟಿ ರೂಪಾಯಿಗಳು).

3. ನೆದರ್‌ಲ್ಯಾಂಡ್ (ಡಚ್): 1. ಬಿಜಾಪುರ (ಹುನಗುಂದ ತಾಲ್ಲೂಕು ಹೊರತುಪಡಿಸಿ), 2. ಧಾರವಾಡ (ಸಹಾಯಧನ 57.98 ಕೋಟಿ ರೂಪಾಯಿಗಳು).

ಆ. 1. ಬೆಂಗಳೂರು (ನಗರ) ಜಿಲ್ಲೆ
2. ಚಿಕ್ಕಮಗಳೂರು.
3. ಕೊಡಗು
4. ಉತ್ತರ ಕನ್ನಡ
5. ತುಮಕೂರು.
6. ಹಾಸನ.

ಇ. –ಇಲ್ಲ–

ಟಿ. ನರಸೀಪುರ ಕ್ಷೇತ್ರಕ್ಕೆ ಕುಡಿಯುವ ನೀರಿನ ಯೋಜನೆ.

1088 (1571): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):-

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಟಿ. ನರಸೀಪುರ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳಿವೆ ? ಹಾಗೂ ಅದರಲ್ಲಿ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯಲ್ಲಿ ಟ್ಯಾಂಕನ್ನು ನಿರ್ಮಿಸಲಾಗಿದೆ;

2. ಇನ್ನು ಬಾಕಿ ಇರುವ ಗ್ರಾಮಗಳಿಗೆ ಯಾವಾಗ ಕುಡಿಯುವ ನೀರಿನ ಯೋಜನೆಯನ್ನು ಮಾಡಲಾಗುವುದು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):-

ಅ. ಟಿ. ನರಸೀಪುರ ಕ್ಷೇತ್ರದಲ್ಲಿ 146 ಹಳ್ಳಿಗಳು ಇರುತ್ತವೆ.

44 ಹಳ್ಳಿಗಳಲ್ಲಿ ಕೊಳವೆ ನೀರು ಸರಬರಾಜು ಯೋಜನೆಯಡಿಯಲ್ಲಿ ಮತ್ತು 25 ಹಳ್ಳಿಗಳಲ್ಲಿ ಕಿರು ನೀರು ಸರಬರಾಜು ಯೋಜನೆಯಲ್ಲಿ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ.

ಆ. ಬಾಕಿ ಇರುವ ಗ್ರಾಮಗಳಿಗೆ ಜನಸಂಖ್ಯೆಯ ಆಧಾರದ ಮೇಲೆ ಹಂತ ಹಂತವಾಗಿ ನೀರಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಟಿ. ನರಸೀಪುರ - ನಂಜನಗೂಡು ತಾಲ್ಲೂಕಿನಲ್ಲಿ ಬೆಳೆಗಳಿಗೆ ಸಾಂಕ್ರಾಮಿಕ ರೋಗ

1089 (1572): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):-

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಟಿ. ನರಸೀಪುರ ತಾಲ್ಲೂಕು, ನಂಜನಗೂಡು ತಾಲ್ಲೂಕುಗಳಲ್ಲಿ ಭತ್ತ ಮತ್ತು ರಾಗಿ ಹಾಗೂ ಇತರೆ ಬೆಳೆಗಳು ಸಾಂಕ್ರಾಮಿಕ ನಂಜುರೋಗದಿಂದ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಹಾಗಿದ್ದಲ್ಲಿ, ಅದನ್ನು ತಡೆಯಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಇ. ಅದರಿಂದಾಗಿ ರೈತರಿಗೆ ಉಂಟಾದ ನಷ್ಟವನ್ನು ತುಂಬಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಬೀದರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೊಳಗಾಗಿರುವ ಗ್ರಾಮಗಳು.

1090 (647): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):-

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಬೀದರ್ ಜಿಲ್ಲೆಯಲ್ಲಿ ಪ್ರತಿ ವರ್ಷ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ತೀವ್ರ ಅಭಾವಕ್ಕೆ ಒಳಗಾಗುವ ಗ್ರಾಮಗಳನ್ನು ಗುರುತಿಸಲಾಗಿದೆಯೆ;

2. ಹಾಗಿದ್ದಲ್ಲಿ ಆ ಗ್ರಾಮಗಳು ಯಾವುವು;

3. ಬೇಸಿಗೆ ಕಾಲದಲ್ಲಿ ಈ ಗ್ರಾಮಗಳಿಗೆ ಕುಡಿಯುವ ನೀರಿನ ಸಮರ್ಪಕ ಸರಬರಾಜಿಗಾಗಿ ಕೈಗೊಂಡಿರುವ ಕ್ರಮಗಳೇನು;

4. ಇದಕ್ಕಾಗಿ ಖರ್ಚು ಮಾಡಲಾಗುವ ಹಣವೆಷ್ಟು ? (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು) ?.

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1. ಹೌದು.

2. ಗ್ರಾಮಗಳ ಹೆಸರುಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.